**(ದಿನಾಂಕಃ 15-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು)**

**ಮುಖ್ಯ ವಿಚಾರಣೆ : ವಾದಿ ಪರ ಶ್ರೀ. ಎಂ ಎ ಎಂ ವಕೀಲರಿಂದ -**

ನಾನು ಈ ದಾವೆಯಲ್ಲಿ ವಾದಿ ಇರುತ್ತೇನೆ. ಈ ದಿನ ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ನನ್ನ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ಅದರಲ್ಲಿ ಬರೆದ ಎಲ್ಲ ಸಂಗತಿಗಳು ಸತ್ಯವಾಗಿರುತ್ತದೆ. ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ನಾನು ಇಬ್ರಾಹಿಂ ಎಂ ನದಾಫ ಇದ್ದು ನಾನು ನಿವೃತ್ತ ಟೀಚರ ಇದ್ದು ನಾನು ಈ ಹಿಂದೆ ನನ್ನ ಮಗನಿಗೆ ವಿಲ್ ಬರೆದುಕೊಟ್ಟಿದ್ದು ಈಗ ಅದನ್ನು ಕ್ಯಾನ್ಸಲ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆತ ನನಗೆ ಈಗ ನೋಡಿಕೊಳ್ಳಲು ತಯಾರ ಇಲ್ಲ ಹಾಗೂ ನನಗೆ ಫೋನ ಸಹ ಮಾಡುವುದಿಲ್ಲ, ಆತ ಆಸ್ಟ್ರೇಲಿಯಾದ ಸಿಟಿಜನ್ ಆಗಿರುತ್ತಾರೆ. ಆದಕಾರಣ ನಾನು ಆ ವಿಲನ್ನು ರದ್ದು ಮಾಡಲು ನ್ಯಾಯಾಲಯಕ್ಕೆ ಬಂದಿರುತ್ತೇನೆ. ನಾನು ಈಗ ಕಾಯಿಲೆಗೆ ಬಿದ್ದಿದ್ದು ನನಗೆ ನಡೆಯಲೂ ಸಹ ಆಗುವುದಿಲ್ಲ . ನನ್ನನ್ನು ನನ್ನ ಹೆಂಡತಿಯ ತಂಗಿಯ ಮಗ ಆಸೀಫ ಮೋಕಾಶಿ ಹಾಗೂ ಸಾಧಿಕ ಸಂಗೋಳ್ಳಿ ಕರೆದುಕೊಂಡು ಬಂದಿರುತ್ತಾರೆ. ನಾನು ಈಗ ಹುಬ್ಬಳ್ಳಿಯ ಸನ್ ಸಿಟಿ ಹೆರಿಟೇಜ , ಕೇಶವಾಪೂರ ಹುಬ್ಬಳ್ಳಿಯಲ್ಲಿ ವಾಸವಾಗಿದ್ದೇನೆ.

ದಾವಾ ಆಸ್ತಿ ಪ್ಲಾಟ ನಂ. 580ಎ ಹಾಗೂ ಸರ್ವೆ ನಂ. 969 ನನ್ನ 2ನೇ ಹೆಂಡತಿ ಮುಮತಾಜ ಇಬ್ರಾಹಿಂ ನದಾಫ ಇವರಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಈ ದಿನ ನಾನು ನನ್ನ ಪರವಾಗಿ ಕೆಲವೊಂದು ದಾಖಲೆಗಳನ್ನು ಸಲ್ಲಿಸುತ್ತಿದ್ದೇನೆ . ಅವುಗಳನ್ನು ನನ್ನ ಪರವಾಗಿ ನಿಶಾನೆಗಳಾಗಿ ಗುರುತಿಸಬೇಕೆಂದು ಕೋರಿಕೊಳ್ಳುತ್ತೇನೆ.

ಚೀಫ ಆಫಿಸರ ಮುನಸಿಪಾಲ್ಟಿ ಇವರಿಗೆ ಕೊಟ್ಟ ತಕರಾರು ಅರ್ಜಿಯನ್ನು ಹಾಜರ ಮಾಡಿದ್ದು ಅದನ್ನು ನಿ.ಪಿ-1 ಎಂದು , ಫೈನಲ ವಿಲ್ ಎಂಬ ದಾಖಲೆಯನ್ನು ಹಾಜರ ಮಾಡಿದ್ದು ಅದರ ಮೂಲ ಪ್ರತಿ ನನ್ನ ಮಗ ಪ್ರತಿವಾದಿ ಹತ್ತಿರ ಇದ್ದು , ಈಗ ಅದರ ನಕಲನ್ನು ಹಾಜರ ಮಾಡಿದ್ದು ಅದನ್ನು ನಿ.ಪಿ-2 ಎಂದು ಗುರುತಿಸಲಾಯಿತು. ಈಗ ಗಿಫ್ಟ ಡೀಡ ಎಂಬ ದಾಖಲೆಯನ್ನು ಹಾಜರ ಮಾಡಿದ್ದು ಅದರ ಮೂಲ ಪ್ರತಿ ನನ್ನ ಮಗ ಪ್ರತಿವಾದಿ ಹತ್ತಿರ ಇದ್ದು , ಈಗ ಅದರ ನಕಲನ್ನು ಹಾಜರ ಮಾಡಿದ್ದು ಅದನ್ನು ನಿ.ಪಿ-3 ಮತ್ತು 4 ಎಂದು ಗುರುತಿಸಲಾಯಿತು. ಸದರಿ ಅಂಗಡಿಯನ್ನು ಈಗ ಬಾಡಿಗೆ ಕೊಟ್ಟಿದ್ದು ಅದರ ಬಾಡಿಗೆ ಮೊದಲಿನಿಂದಲೂ ನಾನೇ ತೆಗೆದುಕೊಳ್ಳುತ್ತಿದ್ದು ಅದರ ಕಂದಾಯವನ್ನೂ ಸಹ ನಾನೇ ತುಂಬುತ್ತಿದ್ದೇನೆ .

ನನ್ನ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

ಸದರಿ ಸಾಕ್ಷಿ ಈ ದಿನ ನ್ಯಾಯಾಲಯಕ್ಕೆ ವೀಲ್ ಚೇರ ಮೇಲೆ ಬಂದಿದ್ದು ತನ್ನ ಎರಡೂ ಕಾಲುಗಳ ಸ್ವಾಧೀನ ಇಲ್ಲ ಎಂದು ಹೇಳುತ್ತಾರೆ.

**ವಾಟಿ ಸವಾಲು :** **ಪ್ರತಿವಾದಿ ಗೈರು ಹಾಜರ ಆಗಿದ್ದು, ಅವರ ಪರ ವಕೀಲರು ಶ್ರೀ ಎ ಎಂ ವಂಟಮೂರಿ ಇವರು ಹಾಜರ ಇದ್ದು, ಅವರು ತಮಗೆ ಯಾವುದೇ ಮಾಹಿತಿಯನ್ನು ಪ್ರತಿವಾದಿ ಕೊಟ್ಟಿರುವುದಿಲ್ಲ ಹಾಗೂ ದಾವೆಗೆ ತಕರಾರು ಹಾಕಿಲ್ಲ ಎಂದು ಹೇಳುತ್ತಾರೆ . ಆದ್ದರಿಂದ ಪ್ರತಿವಾದಿ ಪರ ವಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ಮರು ವಿಚಾರಣೆ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**